

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ರದ್ದಿಪತ್ರಿಕೆ-ಸುದ್ದಿಪತ್ರಿಕೆ-ಪ್ರಶ್ನೆಪತ್ರಿಕೆ

ಎರಡು ವಾರಗಳ ಹಿಂದೆ ದಾವಣಗೆರೆಯಲ್ಲಿ ಒಂದು ಸನ್ಮಾನ ಸಮಾರಂಭವಿತ್ತು. ಸನ್ಮಾನಿತರಾದವರು ಹಿರಿಯರಾದ ಮಾಜಿ ರಾಜ್ಯಸಭಾ ಸದಸ್ಯ ಕೆ.ಆರ್. ಜಯದೇವಪ್ಪನವರು. ಸದಾ ಅಪ್ಪಟ ಬಿಳಿಯ ಖಾದಿ ಬಟ್ಟೆ ಧರಿಸುವ ಅವರು ತಾವು ಧರಿಸಿದ ಬಟ್ಟೆಯನ್ನು ಮಾತ್ರ ಪರಿಶುಭ್ರವಾಗಿರುವಂತೆ ನೋಡಿಕೊಂಡವರಷ್ಟೇ ಅಲ್ಲ, ತಮ್ಮ ರಾಜಕೀಯ ಜೀವನದಲ್ಲಿ ನಡೆದಾಡಿದ ಬಟ್ಟೆ(ದಾರಿ)ಯೂ ಪರಿಶುದ್ಧವಾಗಿರುವಂತೆ ಎಚ್ಚರವಹಿಸಿದವರು. ನಾ.ಸು. ಹರ್ಡೇಕರ್‌ರವರ ಕಾಲದಲ್ಲಿ ಸೇವಾದಳ ಸೇರಿ, ನಂತರ ವಕೀಲರಾಗಿ ಬದುಕಿನಲ್ಲಿ ಶಿಸ್ತನ್ನು ಮೈಗೂಡಿಸಿಕೊಂಡವರು. ಅವರನ್ನು ಅಭಿನಂದಿಸಿ ಮಾತನಾಡಿದ ಶ್ರೇಷ್ಠನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶಿವರಾಜ ಪಾಟೀಲರು ಪ್ರಾಸಂಗಿಕವಾಗಿ ಈ ಮುಂದಿನ ಪ್ರಸಿದ್ಧವಾದ ಆಂಗ್ಲ ನುಡಿಗಟ್ಟನ್ನು ಉಲ್ಲೇಖಿಸಿದರು:




"Yesterday is a waste paper, today is a news paper, tomorrow is a question paper and life is an answer paper."

(ನಿನ್ನೆಯೆಂಬುದು ಒಂದು ರದ್ದಿಪತ್ರಿಕೆ, ಇಂದು ಎಂಬುದು ಸುದ್ದಿ ಪತ್ರಿಕೆ, ನಾಳೆ ಎಂಬುದು ಪ್ರಶ್ನೆಪತ್ರಿಕೆ, ಬದುಕೆಂಬುದು ಉತ್ತರಪತ್ರಿಕೆ)!

ಸಭೆಯಲ್ಲಿ ಕಿಕ್ಕಿರಿದು ಸೇರಿದ್ದ ಜನರೆಲ್ಲರೂ ಈ ಮಾತುಗಳನ್ನು ಕೇಳಿ ಹರ್ಷೋದ್ಗಾರ ವ್ಯಕ್ತಪಡಿಸಿದರು. ಬದುಕಿನ ನಿನ್ನೆ-ಇಂದು-ನಾಳೆಗಳನ್ನು ಪತ್ರಿಕೆಯ ವಿಭಿನ್ನ ಅವಸ್ಥೆಗಳಿಗೆ ಮಾಡಿರುವ ಈ ಹೋಲಿಕೆ ಅತ್ಯಂತ ಹೃದಯಂಗಮವಾಗಿತ್ತು.

'ಇಂದು' ಎಂಬುದನ್ನು ಇವತ್ತಿನ ಸುದ್ದಿಪತ್ರಿಕೆಗೂ, ನಾಳೆಯನ್ನು ಪ್ರಶ್ನೆಪತ್ರಿಕೆಗೂ ಮಾಡಿರುವ ಹೋಲಿಕೆಯೇನೋ ಸಮಂಜಸವಾಗಿದೆ. ಆದರೆ ನಿನ್ನೆಯನ್ನು ರದ್ದಿಪತ್ರಿಕೆಗೆ ಹೋಲಿಸಿರುವುದು ಸರಿಯೇ ಎಂಬ ಪ್ರಶ್ನೆ ನಮ್ಮನ್ನು ಬಲವಾಗಿ ಕಾಡಿಸತೊಡಗಿತು. ಸಭೆಯ ಕಾರ್ಯಕಲಾಪಗಳು ಮುಕ್ತಾಯದ ಹಂತ ತಲುಪಿ ನಮ್ಮ ಭಾಷಣದ ಸರದಿ ಬರುವವರೆಗೂ ನಮ್ಮ ಮನಸ್ಸಿನ ಒಳತೋಟಿಯಲ್ಲಿ ವಾದ-ವಿವಾದಗಳು ಸಮುದ್ರದ ಅಲೆಗಳಂತೆ ಅಪ್ಪಳಿಸತೊಡಗಿದವು. ಕೊನೆಗೂ 'ಏಕಸದಸ್ಯ ಪೀಠ' (single bench) ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲೇಬೇಕೆನಿಸಿತು! ಅಂದಿನ ನಮ್ಮ ಭಾಷಣ ಸಭಿಕರೆಲ್ಲರ ಕುತೂಹಲವನ್ನು ಕೆರಳಿಸಿ 'ದ್ವಿಸದಸ್ಯ ಪೀಠ'ದ (Double bench) ಮುಂದೆ ಮಂಡಿಸಿದ ವಾದದಂತಿತ್ತು. ನಮ್ಮ ವಾದವನ್ನು ಗಂಭೀರವಾಗಿ ಆಲಿಸುತ್ತಿದ್ದ ನ್ಯಾಯಮೂರ್ತಿಗಳಾದ ಶಿವರಾಜ ಪಾಟೀಲರು ಮುಗುಳ್ನಗೆ ಬೀರಿದ್ದನ್ನು ನೋಡಿ "Objection sustained" ಎಂದು ಅರ್ಥೈಸಿ ಸ್ಥಳೀಯ 'ಜನತಾವಾಣಿ' ಪತ್ರಿಕೆ ಮಾರನೆಯ ದಿನ ಮುಖಪುಟದಲ್ಲಿ ವರದಿಮಾಡಿತ್ತು. ನಮ್ಮ ವಾದವನ್ನು ಪುಷ್ಟೀಕರಿಸಲು ಮುಂದೆ ವಿವರಿಸುವಂತೆ ನಾವು ಕೊಟ್ಟ "Citation" ಅವರೇ ಆಗಿದ್ದರಿಂದ "Not before me" ಎಂದು ಅವರು ಬೇರೆ ನ್ಯಾಯಪೀಠಕ್ಕೆ ಈ ಕೇಸನ್ನು ವರ್ಗಾಯಿಸಬಯಸಿದಂತಿತ್ತು. ಆದಕಾರಣ ವಿಜಯಕರ್ನಾಟಕದ ವಿಚಾರಶೀಲ ಓದುಗರ 'ಪೂರ್ಣಪೀಠ'ದ (Full bench) ಮುಂದೆ ಅಂತಿಮ ತೀರ್ಮಾನಕ್ಕಾಗಿ ಈ ವಾರದ ಅಂಕಣದ ಮೂಲಕ ನಮ್ಮ ವಾದದ ಮರುಮಂಡನೆ:

ಸಭೆಯ ಕೊನೆಯಲ್ಲಿ ಸಿಕ್ಕ ಸೀಮಿತ ಅವಧಿಯಲ್ಲಿ ಸನ್ಮಾನ್ಯ ನ್ಯಾಯಮೂರ್ತಿಗಳೊಂದಿಗೆ ಖಾಸಗಿಯಾಗಿ ಮಾತನಾಡುವಾಗ ತಿಳಿದುಬಂದ ವಿಚಾರವೆಂದರೆ ನಿನ್ನೆಯನ್ನು ರದ್ದಿಪತ್ರಿಕೆಗೆ ಹೋಲಿಸಿರುವುದರ ಹಿಂದೆ ಇರುವ ಆಶಯ: "Do not cry over the spilt milk"! ಅಂದರೆ ಚೆಲ್ಲಿಹೋದ ಅಥವಾ ಒಡೆದುಹೋದ ಹಾಲಿನ ಬಗ್ಗೆ ಚಿಂತಿಸಿ ಪ್ರಯೋಜನವಿಲ್ಲ. ಮನುಷ್ಯ ತನ್ನ ಬದುಕಿನ ಗತಕಾಲದಲ್ಲಿ ಆಗಿಹೋದ ಕಹಿ ಘಟನೆಯನ್ನು ಮರೆಯಲು ಪ್ರಯತ್ನಿಸಬೇಕು. ಮತ್ತೆ ಮತ್ತೆ ಅದನ್ನೇ ನೆನೆಸಿಕೊಂಡು ಕೊರಗುವುದರಲ್ಲಿ ಅರ್ಥವಿಲ್ಲ. ಇಂದಿನ ಸುದ್ದಿ ಪತ್ರಿಕೆಯನ್ನು ಕುತೂಹಲದಿಂದ ಓದುವ ನಾವು ಇಂದಿನ ದಿನ ನಿನ್ನೆಗೆ ಸರಿದಾಗ ನಾಳೆಯ ದಿನ ಬಂದ ಹೊಸಪತ್ರಿಕೆಯನ್ನು ಕೈಗೆತ್ತಿಕೊಂಡು ಹಳೆಯ ಪತ್ರಿಕೆಯ ಬಗ್ಗೆ ಯಾವ ಚಿಂತೆಯನ್ನೂ ಮಾಡದೆ ರದ್ದಿಪೇಪರ್‌ಗೆ ಹಾಕುತ್ತೇವೆ. ಹಾಗೆಯೇ ಹಿಂದಿನ ಕಹಿಘಟನೆಗಳನ್ನು ಮರೆತು ಇಂದಿನ ಸಮಸ್ಯೆಗಳನ್ನು ಎದುರಿಸಲು ಮನುಷ್ಯ ಸನ್ನದ್ಧನಾಗಬೇಕು. ಇದಕ್ಕೆ ಪೂರಕವಾಗಿ ಹಿಂದಿನ ಕಹಿಘಟನೆಗಳನ್ನಷ್ಟೇ ಅಲ್ಲ, ಸಿಹಿಘಟನೆಗಳನ್ನೂ ನೆನೆಸಿಕೊಂಡು ಪರಿತಪಿಸಬಾರದು ಎನ್ನುತ್ತಾರೆ ಬಸವಣ್ಣನವರು:

**ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ ಮನವೇ**
**ಕಬ್ಬು ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೇ**
**ಗಗನವಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೇ....**

ಮೇಲಿಂದ ಮೇಲೆ 'ಅಯ್ಯೋ ಹೀಗಾಯಿತಲ್ಲಾ' ಎನ್ನುವ ಕೊರಗು ಮನುಷ್ಯನನ್ನು ಹತಾಶೆಯತ್ತ ಕರೆದೊಯ್ಯುತ್ತದೆ. 'ಇದಕ್ಕೂ ಮುಂಚೆ ನಾನು ಹೇಗಿದ್ದೆ' ಎಂದು ಸುಖದ ದಿನಗಳನ್ನು ನೆನೆಸಿಕೊಳ್ಳುವುದು ಆ ಕೊರಗನ್ನು ಇಮ್ಮಡಿಗೊಳಿಸುತ್ತದೆ. ಇದು ಒಂದು ದೃಷ್ಟಿಯಿಂದ ಸರಿ. ಹಾಗೆಂದು ಸಿಹಿ-ಕಹಿ ಘಟನೆಗಳನ್ನು ಸಂಪೂರ್ಣವಾಗಿ ಮರೆಯಬೇಕೆನ್ನುವುದು ಸರಿಯಾಗಲಾರದು. ನಿನ್ನೆಯ ಸಿಹಿ-ಕಹಿ ಘಟನೆಗಳನ್ನು ಮನುಷ್ಯ ಮರೆಯದೆ ಅವುಗಳ ಹಿನ್ನೆಲೆಯಲ್ಲಿ ಈಗ ಹೇಗೆ ಬದುಕಬೇಕೆಂಬುದರ ಕಡೆ ಎಚ್ಚರವಹಿಸಬೇಕಾದ್ದು ಅತ್ಯವಶ್ಯಕ ಎಂಬುದು ನಮ್ಮ ವಾದ. 'ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ' ಆಗಬಾರದಲ್ಲವೇ? ನಿನ್ನೆ ನಡೆದ ಎಲ್ಲ ಘಟನೆಗಳೂ ರದ್ದಿ ಕಾಗದದಂತೆ ನಿಷ್ಪ್ರಯೋಜಕವಲ್ಲ. ಪತ್ರಿಕೆಯ ಎಲ್ಲ ಪುಟಗಳೂ ರದ್ದಿಗೆ ಹೋಗುವುದಿಲ್ಲ. ಓದುಗರು ಅವರವರ ಅಭಿರುಚಿಗೆ ತಕ್ಕಂತೆ ಒಳ್ಳೊಳ್ಳೆಯ ಲೇಖನಗಳನ್ನು ಮತ್ತೆ ಓದಲು ಕತ್ತರಿಸಿ ಇಟ್ಟುಕೊಳ್ಳುತ್ತಾರೆ. ಹದಿಹರೆಯದವರು ಅವರವರ ನೆಚ್ಚಿನ, ಮೆಚ್ಚಿನ ತಾರಾಗಣದ ವಿಭಿನ್ನ ಹಾವಭಾವ-ವಿಲಾಸವಿಭ್ರಮಗಳಿಂದ ಕೂಡಿದ ಆಕರ್ಷಣೀಯ ಚಿತ್ರಗಳನ್ನು ತಮ್ಮ ವಾಸದ ಕೊಠಡಿಯ ಗೋಡೆಗಳನ್ನು ಅಲಂಕರಿಸಲು ಬಳಸುತ್ತಾರೆ. ಅವರಿಗೆ ಬೇಡವಾದದ್ದು ಮಾತ್ರ ರದ್ದಿಯಾಗುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು "ನಾಳೆ ಎಂಬುದು ಪ್ರಶ್ನೆಪತ್ರಿಕೆ, ಬದುಕು ಎಂಬುದು ಉತ್ತರಪತ್ರಿಕೆ" ಎನ್ನುವುದು. ವಿದ್ಯಾರ್ಥಿಗಳು ನಾಳೆಯ ಪ್ರಶ್ನೆಪತ್ರಿಕೆಗೆ ಇಂದು ಸಿದ್ಧತೆಮಾಡಿಕೊಳ್ಳುತ್ತಾರೆ. ಪ್ರಶ್ನೆಗಳು ಏನು ಬರಬಹುದೆಂದು ಗೊತ್ತಿಲ್ಲದಿದ್ದರೂ ಜಾಣ ವಿದ್ಯಾರ್ಥಿಗಳು ಏನೇ ಪ್ರಶ್ನೆ ಬಂದರೂ ಅದಕ್ಕೆ ಸಮರ್ಪಕವಾದ ಉತ್ತರ ನೀಡುವ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ಪ್ರತಿಭಾವಂತ ವಿದ್ಯಾರ್ಥಿಗಳು ಬರೆದ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಮಂಡಲಿಗಳು ದಾಖಲೆಗಳಾಗಿ ಕಾಪಾಡಿಕೊಂಡು ಬರುತ್ತವೆ. ಉಳಿದ ಸಾಧಾರಣ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳು ರದ್ದಿಗೆ ಹೋಗುತ್ತವೆ. ಬುದ್ಧ, ಬಸವಣ್ಣ, ಗಾಂಧಿ, ಏಸು, ಪೈಗಂಬರ್ ಅವರ ಜೀವನದ ಘಟನೆಗಳು, ಅವರು ಮಾಡಿದ ಕಾರ್ಯಗಳು ಅಂದಿಗೇ ಮುಗಿದು ಹೋಗಲಿಲ್ಲ, ಅವು ಸಾರ್ವಕಾಲಿಕವಾದವು. ಬದುಕಿನಲ್ಲಿ ದಿಕ್ಕು ತಪ್ಪಿದಾಗ ಅವು ದಾರಿದೀವಿಗೆಗಳಾಗಿ ಈಗಲೂ ಮಾರ್ಗ ತೋರುತ್ತವೆ.

ಮನುಷ್ಯ ಹೇಗೆ ಬದುಕುತ್ತಾನೆ ಎಂಬುದರ ಮೇಲೆ ಅವನ ಗತಬದುಕು ರದ್ದಿಪತ್ರಿಕೆಯೋ ಅಥವಾ ದಾಖಲೆಯೋ ಎಂಬುದು ನಿರ್ಧಾರವಾಗುತ್ತದೆ. ಇದೇ ಶಿವರಾಜ ಪಾಟೀಲರು ಕೇವಲ 45 ದಿನಗಳ ಕಾಲ ಕರ್ನಾಟಕದ ಲೋಕಾಯುಕ್ತರಾಗಿದ್ದ ನಿನ್ನೆಯ ದಿನಗಳನ್ನು ರದ್ದಿಪತ್ರಿಕೆ ಎನ್ನಲು ಸಾಧ್ಯವೇ? ತಮ್ಮ ಮೇಲೆ ಹುರುಳಿಲ್ಲದ ಆಪಾದನೆ ಬಂದ ಕೂಡಲೇ ಅವರು ಹುದ್ದೆಯನ್ನು ತ್ಯಜಿಸಿ ಆ ಪೀಠಕ್ಕೆ ಒಂದು ಘನತೆಯನ್ನು ತಂದು ಕೊಟ್ಟರು. ಲೋಕಾಯುಕ್ತರಾದವರು ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಒಂದು ಮಾದರಿಯಾದರು. ಅವರ ಜಾಗದಲ್ಲಿ ಇನ್ನೊಬ್ಬರನ್ನು ತರಲು ಕರ್ನಾಟಕ ಸರಕಾರದಿಂದ ಈಗಲೂ ಆಗಿಲ್ಲ. ಅವರ ನಡೆ ಒಂದು ಐತಿಹಾಸಿಕ ದಾಖಲೆಯನ್ನೇ ಸೃಷ್ಟಿಸಿತು.

ಮನುಷ್ಯನಿಗೆ ನಾಳೆ ಬರುವ ಬದುಕಿನ ಸವಾಲುಗಳನ್ನು ಅವು ಎಷ್ಟೇ ಅಜ್ಞಾತವಾಗಿದ್ದರೂ ಎದುರಿಸುವ ಆತ್ಮವಿಶ್ವಾಸ ಇರಬೇಕು; ಫೇಲಾದೆನೆಂದು ಪ್ರಾಣ ಕಳೆದುಕೊಳ್ಳುವ ಅಳ್ಳೆದೆಯ ವಿದ್ಯಾರ್ಥಿಯಂತಾಗಬಾರದು. ಹಿಂದೆ ಆಗಿಹೋದ ಪ್ರಮಾದಕ್ಕಾಗಿ ಪರಿತಪಿಸದೆ ಮತ್ತೆ ಹಾಗಾಗದಂತೆ ವಹಿಸುವ ಒಳಎಚ್ಚರ, ತನ್ನಿಂದ ಆಗಬಹುದಾದುದನ್ನು ಆಗುಮಾಡುವ ದೃಢ ನಿರ್ಧಾರ, ತನ್ನಿಂದ ಆಗದೇ ಇರುವುದನ್ನು ನೋಡಿ ಹತಾಶಗೊಳ್ಳದ ನಿಶ್ಚಲತೆ, ಅದಕ್ಕಾಗಿ ಮತ್ತೊಬ್ಬರನ್ನು ಹಳಿಯದ ಸ್ಥಿರತೆ, ಇದ್ದುದನ್ನು ಇದ್ದಂತೆ ಸ್ವೀಕರಿಸುವ ತನ್ನ ಇತಿಮಿತಿಗಳ ಅರಿವು ಬೇಕಾಗುತ್ತದೆ. ನಾಳೆ ಹೇಗಿರುತ್ತದೆಯೋ ಬಲ್ಲವರಾರು? ನಾಳೆ ಬರುವ ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸುವ ಎದೆಗಾರಿಕೆ ಬೇಕು. ಬಸವಣ್ಣನವರು ಹೇಳುವಂತೆ 'ಯದ್‌ಭಾವಂ ತದ್‌ಭವತಿ, ಉರಿ ಬರಲಿ ಸಿರಿ ಬರಲಿ ಬೇಕು ಬೇಡೆನ್ನೆನು' ಎಂದು ಬದುಕುವ ಮಾನಸಿಕ ಸ್ಥಿತಿ ಅಷ್ಟು ಸುಲಭವಲ್ಲ. ವರ್ತಮಾನದ ಪರಿಶುದ್ಧ ಬದುಕು ಭವಿಷ್ಯದ ಸವಾಲುಗಳಿಗೆ ಅಂಜದ ಮನೋಸ್ಥೈರ್ಯವನ್ನು ಖಂಡಿತಾ ನೀಡುತ್ತದೆ. ಇಂದಿನ ಬದುಕು ನಿನ್ನೆಗೆ ಸರಿದಾಗ ರದ್ದಿ ಕಾಗದವಾಗಿ ವ್ಯರ್ಥವಾಗದಂತೆ, ಅದೊಂದು ದಾಖಲೆಯಾಗುವಂತೆ ಅರ್ಥಪೂರ್ಣವಾಗಿ ಬದುಕುವ ವಿವೇಕ ಮತ್ತು ಛಲ ಇರಬೇಕು. ಆಗ ನಾಳೆ ಎಂಬುದು ಹೇಗೆ ಬಂದರೂ ಅದನ್ನು ಸ್ವೀಕರಿಸುವ ಧೈರ್ಯವಿರುತ್ತದೆ. ಈ ಅರ್ಥದಲ್ಲಿಯೇ ಬಸವಣ್ಣನವರು ಹೇಳಿದ್ದು:

**ನಾಳೆ ಬಪ್ಪುದು ನಮಗಿಂದೇ ಬರಲಿ**
**ಇಂದು ಬಪ್ಪುದು ನಮಗೀಗಲೆ ಬರಲಿ**
**ಇದಕಾರಂಜುವರು, ಇದಕಾರಳುಕುವರು**
**"ಜಾತಸ್ಯ ಮರಣಂ ಧ್ರುವಂ" ಎಂಬುದಾಗಿ**
**ನಮ್ಮ ಕೂಡಲ ಸಂಗಮದೇವರು**
**ಬರೆದ ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳಿಗಳವಲ್ಲ!**

**ಮುಂಬಯಿ**
**10.11.2011**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑